ಆ) ಇದಕ್ಕಾಗಿ ಎಷ್ಟು ಹಣವನ್ನು ಸಾಲದ ನೆರವಿನ ರೂಪದಲ್ಲಿ ಕೊಡಲು ಯೋಜಿಸಲಾಗಿತ್ತು?

ಇ) ಇದರಲ್ಲಿ ಸಾಧಿಸಿದ ಪ್ರಗತಿ ಏನು?

ಶ್ರೀ ಡಿ.ಬಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು):-

ಅ) 1995-96ನೇ ಸಾಲಿನಲ್ಲಿ ಅಂದಾಜು 40,000 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಯ ಪ್ರದೇಶವನ್ನು ವಿಸ್ತರಿಸಲಾಗಿದೆ.

ಆ) 1005-96ನೇ ಆರ್ಥಿಕ ವರ್ಷದಲ್ಲಿ 18,000 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಸಲು ರೂ. 37.57 ಕೋಟಿಗಳ ಮೊತ್ತದ ನಬಾರ್ಡ್ ನೆರವಿನ ಅಭಿವೃದ್ಧಿ ಸಾಲವನ್ನು ಕೊಡಲು ಯೋಜಿಸಲಾಗಿತ್ತು.

ಇ) 1995-96ನೇ ಆರ್ಥಿಕ ವರ್ಷದಲ್ಲಿ ಸುಮಾರು 15,000 ಹೆಕ್ಟೇರ್ ಪ್ರದೇಶದಲ್ಲಿ ತೋಟ-ಗಾರಿಕೆ ಬೆಳೆಗಳನ್ನು ಬೆಳೆಸಲು ರೂ.28.43 ಕೋಟಿಗಳನ್ನು ನಬಾರ್ಡ್ ಸಾಲದ ಯೋಜನೆಯಲ್ಲಿ ಒದಗಿಸಲಾಗಿದೆ.

ವಿಷಯ:- ನಿವೇಶನ ಹಂಚಿಕೆ ಕಾರ್ಯಕ್ರಮದ ಅನುಷ್ಠಾನಕ್ಕೆ ರಚಿಸಲಾದ ತಾಲ್ಲೂಕು ಮಟ್ಟದ ವಸತಿ ಸಮನ್ವಯ ಸಮಿತಿ.

1111 (951) **ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು):-** ಮಾನ್ಯ ಮಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಿವೇಶನ ಹಂಚಿಕೆಗಳ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕೆ ರಚಿಸಿದ ತಾಲ್ಲೂಕು ಮಟ್ಟದ ವಸತಿ ಸಮನ್ವಯ ಸಮಿತಿ ಎಷ್ಟು ತಿಂಗಳಿಗೊಮ್ಮೆ ಸಭೆ ಸೇರಬೇಕು?

ಆ) ತಾಲ್ಲೂಕು ಮಟ್ಟದ ಸಮಿತಿಯನ್ನು ಯಾವಾಗ ರಚಿಸಲಾಯಿತು?

ಇ) ಹಿರೇಕೆರೂರು ತಾಲ್ಲೂಕು ಸಮಿತಿ ಈಗ ಎಷ್ಟು ಸಭೆ ನಡೆಸಿದೆ?

ಈ) ಪ್ರತಿ ತಿಂಗಳು ತಪ್ಪದೇ ಸಭೆ ನಡೆಸಲು ಸರ್ಕಾರದವರು ನಿರ್ದೇಶನ ನೀಡುವರೇ?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು):-

ಅ) ತಿಂಗಳಿಗೊಮ್ಮೆ ಸಭೆ ಸೇರಬೇಕು.

ಆ) ಸರ್ಕಾರಿ ಆದೇಶ ಸಂಖ್ಯೆ : ಹೆಚ್ಓಯುಡಿ 1 ಹೆಚ್ಎಹೆಚ್ (3) 95 ದಿನಾಂಕ : 18.8.95 ರಂತೆ ತಕ್ಷಣ ಜಾರಿಗೆ ಬರುವಂತೆ ರಚಿಸಲಾಗಿದೆ.

ಇ) ದಿನಾಂಕ : 22.2.96 ಮತ್ತು 27.6.96ರಂದು ಒಟ್ಟು ಎರಡು ಸಭೆಗಳನ್ನು ನಡೆಸಿದೆ.

ಈ) ಸರ್ಕಾರದ ಆದೇಶ ಸಂಖ್ಯೆ : ಹೆಚ್ಓಯುಡಿ : 1 : ಹೆಚ್ಎಹೆಚ್ (3) 95 ದಿನಾಂಕ : 18.8.95 ರಂತೆ ಪ್ರತಿ ತಿಂಗಳು ಸಭೆ ನಡೆಸಲು ನಿರ್ದೇಶನ ನೀಡಿರುವ ರೀತಿ ಸಭೆಗಳನ್ನು ತಪ್ಪದೇ ನಡೆಸಬೇಕೆಂದು ಸಂಬಂಧಿಸಿದವರಿಗೆ ತಿಳಿಸಲಾಗಿದೆ.